ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಶುಕ್ರವಾರ, ದಿನಾಂಕ ೩ನೇ ಏಪ್ರಿಲ್ ೧೯೮೭/ಚೈತ್ರ ೧೩, ೧೯೦೯ ಶಕ

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ೨-೫೫ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ.ಜಿ. ಬಣಕಾರ್) ಅವರು ಪೀಠವನ್ನು ಅಲಂಕರಿಸಿದ್ದರು]

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿವಠಾತಿನ ಮೂಲಕ ನೀಡಲಾದ ಉತ್ತರಗಳು

೧ ಸಂತಾಪ ಸೂಚಕ ನಿರ್ಣಯ

ಅಧ್ಯಕ್ಷರು.—ಮಾಜಿ ಶಾಸಕರಾದ ಶ್ರೀ ಶಿವನಂಜೇಗೌಡರು ಈ ದಿವಸ ಬೆಳ್ಳಿಗೆ ನಿಧನರಾದರೆಂದು ಈ ಸಭೆಗೆ ತಿಳಿಸಲು ವಿಷಾಧಿಸುತ್ತೇನೆ. ೧೯೪೫ ರಿಂದ ೧೯೪೭ರವರೆಗೆ ಅವರು ಮೈಸೂರು ಪ್ರಜಾಪ್ರತಿನಿಧಿಸಭಾ ಸದಸ್ಯರಾಗಿದ್ದರು ೧೯೫೨ ರಿಂದ ೧೯೫೭ರವರೆಗೆ ವಿಧಾನಸಭಾ ಸದಸ್ಯರಾಗಿ ತಮ್ಮ ಸೇವೆಯನ್ನು ಸಲ್ಲಿಸಿರುತ್ತಾರೆ. ನಿಧನ ಹೊಂದಿದ ಸದಸ್ಯರ ಆತ್ಮಕ್ಕೆ ಶಾಂತಿ ಕೋರುವ ಸಲುವಾಗಿ ಎಲ್ಲರೂ ಒಂದು ನಿಮಿಷ ಕಾಲ ಎದ್ದು ನಿಂತು ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಸಭೆಯ ಮಾನ್ಯ ಸದಸ್ಯರೆಲ್ಲರೂ ಒಂದು ನಿಮಿಷ ಕಾಲ ಮೌನವನ್ನು ಆಚರಿಸಿದರು)

ಈ ಸಭೆಯಲ್ಲಿ ಅಂಗೀಕರಿಸಿದ ನಿರ್ಣಯವನ್ನು ಮೃತರ ಕುಟುಂಬದ ಸದಸ್ಯರಿಗೆ ಕಳುಹಿಸಿಕೊಡಲಾಗುವುದು.

೨ ಪ್ರಕಟಣೆಗಳು

MESSAGE FROM THE LEGISLATIVE COUNCIL

MR. SPEAKER.

I have received the following message from the Chairman, Legislative Council.

"As required by Rule 114 of the Rules of Procedure and Conduct of Business in Karnataka Legislative Council, I transmit the following Bill which have been agreed to by the Karnataka Legislative Council on 2nd April, 1987 without amendments.

1. The Public Wakfs (Extension of Limitation) (Karnataka Amendment) Bill, 1987.

2. The Karnataka Universities of Agricultural Sciences (Amendment) Bill, 1987.
3. The Karnataka State Universities (Amendment) Bill, 1987.
4. The Karnataka Stamp (Amendment) Bill, 1987.
5. The Code of Criminal Procedure (Karnataka Amendment) Bill. 1987.

೨. ಸಭೆಯ ಮಂಂದಿಡಲಾದ ಕಾಗದ ಪತ್ರಗಳು

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ೧೯೭೬ ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆಯ ೪೫ (೨) ರ ಕಲಮಿನ ಮೇರೆಗೆ ಮಂತ್ರಿ ೧೯೮೫-೮೪ನೇ ಇಸವಿಯ ಗುಲ್ಬರ್ಗಾ ವಿಶ್ವವಿದ್ಯಾನಿಲಯದ ವಾರ್ಷಿಕ ವರದಿಯನ್ನು ಸಭೆಯ ಮಂಂದೆ ಮಂಂಡಿಸಲು ನಾನು ತಮ್ಮ ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಮಂಂಡಿಸಲಾಯಿತು.

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಅಬ್ಕಾರಿ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನನ್ನ ಹೆಸರಿನ ಮುಂದೆ ಇರುವ ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

೧೯೬೫ನೇ ಇಸವಿಯ ಕರ್ನಾಟಕ ಅಬ್ಕಾರಿ ಶಾಸನದ ೭೧ (೪)ನೇ ಕಲಮಿನ ಮೇರೆಗೆ—

ಅ) ೧೯೮೬ನೇ ಇಸವಿಯ ಕರ್ನಾಟಕ (ಅಬ್ಕಾರಿ ಅಬ್ಕಾರಿ ಸುಂಕಗಳು) (ತಿದ್ದುಪಡಿ) ನಿಯಮಂದ ಬಗ್ಗೆ ದಿನಾಂಕ ೧೯ನೇ ಸಪ್ಟೆಂಬರ್ ೧೯೮೬ ರಂದು ಹೊರಡಿಸಲಾದ ಹೆಚ್. ಡಿ. ೨ ಪಿ.ಇ.ಎಸ್. ೮೬ನೇ ಕ್ರಮಾಂಕ ಅಧಿಸೂಚನೆ.

ಆ) ೧೯೮೬ನೇ ಇಸವಿಯ ಕರ್ನಾಟಕ ಅಬ್ಕಾರಿ (ಡಿಸ್ಟಿಲರಿ ಮತ್ತು ಉಗ್ರಾಣ) (ತಿದ್ದುಪಡಿ) ನಿಯಮಂದ ಬಗ್ಗೆ ದಿನಾಂಕ ೧೫ನೇ ಆಗಸ್ಟ್ ೧೯೮೬ ರಂದು ಹೊರಡಿಸಲಾದ ಹೆಚ್‌ಡಿ ೨ ಪಿಇಎಸ್ ೮೬ನೇ ಕ್ರಮಾಂಕದ ಅಧಿಸೂಚನೆ.

ಇ) ೧೯೮೬ನೇ ಇಸವಿಯ ಕರ್ನಾಟಕ ಅಬ್ಕಾರಿ (ಪಾನೀಯಗಳ ಚಿಲ್ಲರೆ ಮಾರಾಟದ ಹಕ್ಕುಗಳ ಗಂತ್ತಿಗೆ) (ತಿದ್ದುಪಡಿ) ನಿಯಮಂದ ಬಗ್ಗೆ ದಿನಾಂಕ ೨೬ನೇ ಮೇ ೧೯೮೬ರಂದು ಹೊರಡಿಸಲಾದ ಹೆಚ್‌ಡಿ ೧ ಪಿಇಎಸ್. ೮೬ ನೇ ಕ್ರಮಾಂಕದ ಅಧಿಸೂಚನೆ ಹಾಗೂ

ಈ) ೧೯೮೬ನೇ ಇಸವಿಯ ಕರ್ನಾಟಕ ಅಬ್ಕಾರಿ (ಮದ್ಯದ ಬಾಟ್ಲಿಂಗ್) (ತಿದ್ದುಪಡಿ) ನಿಯಮಂದ ಬಗ್ಗೆ ದಿನಾಂಕ ೧೧ನೇ ಏಪ್ರಿಲ್ ೧೯೮೬ರಂದು ಹೊರಡಿಸಲಾದ ಹೆಚ್‌ಡಿ ೨೦ ಇಡಿಸಿ ೮೬ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮಂಂದಿಡುತ್ತೇನೆ.

ಅಧ್ಯಕ್ಷರು.—ಮೇಲ್ಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಗಿದೆ.

೪. ವರದಿಗಳನ್ನೊಪ್ಪಿಸುವುದು

ಶ್ರೀ ಲಕ್ಷ್ಮೀನರಸಿಂಹಯ್ಯ (ಉಪಾಧ್ಯಕ್ಷರು).—ಮಾನ್ಯ ಅಧ್ಯಕ್ಷರೇ, ಈ ಕೆಳಕಂಡ ವರದಿಯನ್ನು ಸಭೆಯ ಮುಂದೆ ಮಂಂಡಿಸುತ್ತೇನೆ.

೧. ಖಾಸಗಿ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಐದನೇ ವರದಿಯನ್ನು ಸಭೆಯಲ್ಲಿ ಮಂಂಡಿಸುತ್ತೇನೆ.